# ಕರ್ನಾಟಕ ವಿಧಾನ ಪರಿಷತ್ತು

**ಸದಸ್ಯರ ಹೆಸರು** : ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)

**ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ** : 148

**ಉತ್ತರಿಸಬೇಕಾದ ದಿನಾಂಕ** : 16.02.2022.

**ಉತ್ತರಿಸಬೇಕಾದ ಸಚಿವರು** : ಮಾನ್ಯ ಪಶುಸಂಗೋಪನೆ ಸಚಿವರು.

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿರುವ ಒಟ್ಟು ಅಮೃತ್ ಮಹಲ್ ಕಾವಲ್‌ಗಳು ಎಷ್ಟು; ಅವುಗಳ ವಿಸ್ತೀರ್ಣವೆಷ್ಟು; ಮತ್ತು ಈ ಅಮೃತ್ ಮಹಲ್ ಕಾವಲುಗಳು ಯಾವ ಯಾವ ಸರ್ಕಾರಿ ಇಲಾಖೆಗಳ ಅಧೀನದಲ್ಲಿವೆ; (ಜಿಲ್ಲಾವಾರು ಮತ್ತು ಇಲಾಖಾವಾರು ಮಾಹಿತಿ ನೀಡುವುದು)</td><td>ಅಮೃತ್ ಮಹಲ್ ತಳಿ ಸಂವರ್ಧನಾ ಕೇಂದ್ರವು, ಚಿಕ್ಕಮಗಳೂರು ಜಿಲ್ಲೆ ತರಿಕೆರೆ ತಾಲೂಕು, ಅಜ್ಜಂಪುರ ಕೇಂದ್ರವಾಗಿರುತ್ತದೆ ಇದಕ್ಕೆ ಸಂಬಂಧ ಪಟ್ಟಂತೆ 6 ಜಿಲ್ಲೆಗಳಲ್ಲಿ 63 ಕಾವಲುಗಳನ್ನು ಹೊಂದಿರುತ್ತದೆ.
<table>
<tr><th>ಕ್ರಸಂ</th><th>ಜಿಲ್ಲೆಗಳು</th><th>ಕಾವಲು ಸಂಖ್ಯೆ</th><th>ವಿಸ್ತೀರ್ಣ</th></tr>
<tr><td>1</td><td>ಚಿಕ್ಕಮಗಳೂರು</td><td>13</td><td>14339.37</td></tr>
<tr><td>2</td><td>ಚಿತ್ರದುರ್ಗ</td><td>24</td><td>34968.87</td></tr>
<tr><td>3</td><td>ದಾವಣಗೆರೆ</td><td>02</td><td>3685.71</td></tr>
<tr><td>4</td><td>ಹಾಸನ</td><td>15</td><td>11498.91</td></tr>
<tr><td>5</td><td>ತುಮಕೂರು</td><td>07</td><td>3417.36</td></tr>
<tr><td>6</td><td>ಮಂಡ್ಯ</td><td>02</td><td>357.32</td></tr>
<tr><td colspan="2">ಒಟ್ಟು</td><td>63</td><td>68267.54</td></tr>
</table></td></tr>
<tr><td>ಆ</td><td>ರಾಜ್ಯದಲ್ಲಿರುವ ಅಮೃತ್ ಮಹಲ್ ಕಾವಲುಗಳಲ್ಲಿ ಎಷ್ಟು ವಿಸ್ತೀರ್ಣವನ್ನು ಒತ್ತುವರಿ ಮಾಡಲಾಗಿದೆ; ಈ ಒತ್ತುವರಿ ತೆರುವಿಗೆ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಜಿಲ್ಲಾವಾರು ಮತ್ತು ಇಲಾಖಾವಾರು ಮಾಹಿತಿ ನೀಡುವುದು)</td><td>ಅಮೃತ್ ಮಹಲ್ ಕಾವಲುಗಳಲ್ಲಿ 10471.62 ಎಕರೆ ಪ್ರದೇಶವು ಒತ್ತುವರಿಯಾಗಿರುತ್ತದೆ. ಅಮೃತ್ ಮಹಲ್ ಕಾವಲು ಜಮೀನುಗಳ ಅನಧಿಕೃತ ಒತ್ತುವರಿ ತೆರವುಗೊಳಿಸಲು ಸರ್ಕಾರದ ಆದೇಶ ಸಂಖ್ಯೆ:ಆರ್.ಡಿ 61:ಎಲ್.ಜಿ.ಎ 2017: ಬೆಂಗಳೂರು, ದಿನಾಂಕ:02-01-2018 ರಂತೆ ಉಪ ವಿಭಾಗಾಧಿಕಾರಿಗಳ ನೇತೃತ್ವದ ವಿಶೇಷ ಕಾರ್ಯ ಪಡೆಯನ್ನು (Special Task Force for Eviction of encroachment of amruth mahal kaval land) ರಚಿಸಿ ಕ್ರಮ ವಹಿಸಲಾಗುತ್ತಿದೆ.
<table>
<tr><th>ಕ್ರಸಂ</th><th>ಜಿಲ್ಲೆಗಳು</th><th>ಒತ್ತುವರಿ ವಿಸ್ತೀರ್ಣ</th></tr>
<tr><td>1</td><td>ಚಿಕ್ಕಮಗಳೂರು</td><td>4514.10</td></tr>
<tr><td>2</td><td>ಚಿತ್ರದುರ್ಗ</td><td>1292.28</td></tr>
<tr><td>3</td><td>ದಾವಣಗೆರೆ</td><td>553.21</td></tr>
<tr><td>4</td><td>ಹಾಸನ</td><td>3846.73</td></tr>
<tr><td>5</td><td>ತುಮಕೂರು</td><td>172.00</td></tr>
<tr><td>6</td><td>ಮಂಡ್ಯ</td><td>93.30</td></tr>
<tr><td colspan="2">ಒಟ್ಟು</td><td>10471.62</td></tr>
</table></td></tr>
</table>

| | | |
|---|---|---|
| ಇ | ರಾಜ್ಯದ ಉಚ್ಚನ್ಯಾಯಾಲಯ ಸರ್ಕಾರದ ಅರಣ್ಯ ಮತ್ತು ಪಶುಸಂಗೋಪನೆ ಕಾರ್ಯದರ್ಶಿಗಳಿಗೆ ಒತ್ತುವರಿ ತೆರೆವಿನ ವಿಷಯದಲ್ಲಿ ನ್ಯಾಯಾಲಯದ ಮುಂದೆ ಹಾಜರಾಗಲು ಸಮನ್ಸ್ ಹೊರಡಿಸಿರುವುದು ನಿಜವೇ; (ಹಾಗಿದ್ದಲ್ಲಿ, ಈ ಪ್ರಕರಣದ ಪೂರ್ಣ ವಿವರ ನೀಡುವುದು) | ಅಪರ ಮುಖ್ಯಕಾರ್ಯದರ್ಶಿಗಳು ಅರಣ್ಯ ಇಲಾಖೆ ಹಾಗೂ ಉಪ ನಿರ್ದೇಶಕರು ಅಮೃತ್ ಮಹಲ್ ತಳಿ ಸಂವರ್ಧನಾ ಕೇಂದ್ರ, ಅಜ್ಜಂಪುರ ಇಲಾಖೆಯ ಒತ್ತುವರಿ ತೆರುವಿನ ವಿಷಯದಲ್ಲಿ ಉಚ್ಚನ್ಯಾಯಾಲಯದ ಮುಂದೆ ದಿನಾಂಕ:08-02-2022 ರಂದು ಹಾಜರಾಗಿರುತ್ತಾರೆ. ಪ್ರಕರಣದ ಸಂಖ್ಯೆ W.P.No:46528/2016(GM-For) ಬಾಸೂರು, ಅಮೃತ್‌ಮಹಲ್ ಕಾವಲಿನಲ್ಲಿ ಕಾವಲುಗಾರರು 9 ಜನರ ಪೈಕಿ 8 ಜನರು ಒಟ್ಟು 23 ಎಕರೆ ಭೂಮಿಯ ಒತ್ತುವರಿ ಮಾಡಿರುತ್ತಾರೆ ಸದರಿ ಒತ್ತುವರಿ ತೆರವುಗೊಳಿಸಿ ನ್ಯಾಯಾಲಯದಲ್ಲಿ Affidavit ಅನ್ನು ಸಲ್ಲಿಸಲಾಗಿದೆ ಈ ಪ್ರಕರಣ ವಿಚಾರಣಾ ಹಂತದಲ್ಲಿರುತ್ತದೆ. |
| ಈ | ರಾಜ್ಯದಲ್ಲಿರುವ ಈ ಅಮೃತ್ ಮಹಲ್ ಕಾವಲುಗಳಲ್ಲಿ ದೇಶಿಯ ತಳಿಗಳಾದ ಅಮೃತ, ಹಳ್ಳಿಕಾರ ಮುಂತಾದ ತಳಿಗಳನ್ನು ವೃದ್ಧಿ ಮಾಡಲು ಕೇಂದ್ರ ಸರ್ಕಾರದ ರಾಷ್ಟ್ರೀಯ ಗೋಕುಲ ಅಭಿಯಾನದಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಮತ್ತು ಯೋಜನೆಗಳು ಯಾವುವು; ಈ ಯೋಜನೆ ಅಡಿ ಕೇಂದ್ರ ಸರ್ಕಾರದಿಂದ ದೊರೆತಿರುವ ಆರ್ಥಿಕ ನೆರವು ಎಷ್ಟು? (ಜಿಲ್ಲಾವಾರು ಮತ್ತು ಕಾರ್ಯಕ್ರಮವಾರು ಪೂರ್ಣ ಮಾಹಿತಿಯನ್ನು ನೀಡುವುದು) | ಕೇಂದ್ರ ಸರ್ಕಾರದ ರಾಷ್ಟ್ರೀಯ ಗೋಕುಲ ಅಭಿಯಾನದಲ್ಲಿ ಅಮೃತ್ ಮಹಲ್ ತಳಿ ಸಂವರ್ಧನಾ ಉಪ ಕೇಂದ್ರ, ಲಿಂಗದಳ್ಳಿ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಮೃತ್ ಮಹಲ್ ತಳಿಗಳ ಗೋಕುಲ ಗ್ರಾಮವನ್ನು ಸ್ಥಾಪಿಸಲಾಗುತ್ತಿದೆ. ಇದುವರೆವಿಗೆ ಈ ಯೋಜನೆಯಡಿ ರೂ.250 ಲಕ್ಷಗಳನ್ನು ಬಿಡುಗಡೆಯಾಗಿರುತ್ತದೆ. ಯೋಜನೆ ಅನುಷ್ಠಾನದ ಕಾರ್ಯ ಪ್ರಗತಿಯಲ್ಲಿದೆ. |

**ಪಸಂಮೀ ಇ-21 ಸಲೆವಿ 2022**

(ಪ್ರಭು ಬಿ. ಚವ್ಹಾಣ್)
**ಪಶುಸಂಗೋಪನೆ ಸಚಿವರು**